ಕೃಷಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ದುರುಗೇಶ ಅಂಕುಂ ವಿಜಯನಗರ ಜಿಲ್ಲೆಯ ಕೂಡ್ಲಿಗಿಯವರು. ಕಥೆ, ಕವಿತೆಯಷ್ಟೇ ಈಜುವುದರಲ್ಲೂ ಅಡುಗೆ ಮಾಡುವುದರಲ್ಲೂ ಆಸಕ್ತರು. ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿ.

ಆದರೂ ಗೆಳತಿ ಇಷ್ಟಪಟ್ಟಿರುವಾಗ ಕರೆದುಕೊಂಡು ಹೋಗದೇ ಇರುವುದು ಸಾಧ್ಯವೇ? ಮಧ್ಯಾಹ್ನದ ಊಟಕ್ಕೆಂದು ಎತ್ತಿಟ್ಟದ ದುಡ್ಡನ್ನು ಊಟ ಮಾಡದೇ ಉಳಿಸಿ ಅಲ್ಲಿಗೆ ಹೋಗಿದ್ದ. ಅವನಿಗೆ ಇಡೀ ಹೊಟೇಲಿನ ಅಲಂಕಾರ... ಅದರ ಗ್ಲಾಸುಗಳು... ಟೇಬಲ್... ಇವೆಲ್ಲವೂ ತನ್ನ ತಳ್ಳುಗಾಡಿಯನ್ನು ಅಣಕಿಸುವಂತೆ ಕಂಡವು. ತನ್ನ ಎದುರು ಲೋಟ ತಂದಿಟ್ಟ ವೇಟರ್‌ನ ನೋಡಿ ತನ್ನನ್ನೇ ನೋಡಿಕೊಳ್ಳುವಂತೆ ಭಾಸವಾಯಿತು. ಅವನು ಶುಭ್ರವಾದ ಬಿಳಿ ಬಣ್ಣದಲ್ಲಿದ್ದಾನೆ. ಅವನ ಮಾತಿನಲ್ಲಿ ವಿನಯವಂತಿಕೆ ಇದೆ. ಇವ್ಯಾವುವೂ ತನಗೆ ದಕ್ಕುವಂಥದ್ದಲ್ಲ ಎಂದು ಎನಿಸಿತ್ತು. ದಿನನಿತ್ಯ ಅಪರಿಚಿತರಿಗೆ ಕಾಫಿಯನ್ನಾಗಲೀ, ಟೀಯನ್ನಾಗಲೀ ಕೊಡುವ ಅಭ್ಯಾಸವಿತ್ತೇ ಹೊರತು ಎಂದೂ ತನಗಾಗಿ ಇಂತಹ ಐಷಾರಾಮಿ ಹೊಟೇಲ್‌ಗೆ ಬಂದು ಕೊಂಡು ತಿಂದು ಅಭ್ಯಾಸವಿರಲಿಲ್ಲ. ಅವನ ಬಿಳಿ ಉಡುಪು ತನ್ನ ಹರಕಲು ಅಂಗಿಗಿಂತ ಫಳಫಳ ಹೊಳೆಯುವುದನ್ನೂ ಕಂಡು ತಲೆ ಸುತ್ತಿದಂತಾಯಿತು. ಆದರೆ, ಪರಿವೆ ಇಲ್ಲದೆ ಘಟಘಟನೆ ಕಾಫಿ ಹೀರುತ್ತಿದ್ದ ಅವಳು ಒಂದು ಪ್ಲೇಟು ಈರುಳ್ಳಿ ಪಕೋಡಾ ಆರ್ಡರ್ ಮಾಡು ಎಂದು ಅವನತ್ತ ನೋಡುತ್ತಾ ತಣ್ಣಗೆ ಹೇಳಿದಳು.



ಐಸ್‌ಕ್ರೀಂ ತಂದು ಕೊಟ್ಟ ದಿನ ತಣ್ಣಗಾಗಿರುತ್ತಿದ್ದಳು. ಶೂ ಕೊಡಿಸಿದ ದಿನ ಕೆನ್ನೆಯನ್ನು ಬರಸೆಳೆದು ಮುತ್ತಿಡುತ್ತಿದ್ದಳು. ಹೀಗೆ ಪ್ರತಿಸಲವೂ ಭೇಟಿಯಾದಾಗ ಅವನಿಗೆ ಅವಳು ತನ್ನಲ್ಲಿ ಏನೋ ಹುಡುಕುವಂತೆ ಕಾಣುತ್ತಿದ್ದಳು. ಈ ಎಲ್ಲ ಘಟನೆಗಳು ಒಂದು ತಾರ್ಕಿಕ ಅಂತ್ಯ ಕಂಡಿದ್ದು ಒಂದು ಭಾನುವಾರದ ಬೆಳಗಿನಲ್ಲಿ 5.30ರ ವೇಳೆಗೆ ಹಂಪಿ ಎಕ್ಸ್‌ಪ್ರೆಸ್ ಬರುವ ಒಂದು ಗಂಟೆಗೆ ಮುಂಚೆ.

ಇದ್ದಕ್ಕಿದ್ದಂತೆ ಬೆಳಗಿನ ಮಂಜಿನಲ್ಲಿ ಅವಳು ಬಂದಂತೆ ಅನಿಸಿತು. ಮಂಜಿನ ಮಬ್ಬಿನಲಿ ಹತ್ತಿರವಾದಂತೆ ಅವಳ ಮುಖ ಸ್ಪಷ್ಟವಾಗತೊಡಗಿತ್ತು. ಜೊತೆಗೊಂದು ನೆರಳು ಕಾಣಿಸಿಕೊಂಡಿತ್ತು. ಆ ನೆರಳಿನ ಜೊತೆ ಅವಳು ಪರಸ್ಪರ ಕೈ ಹಿಡಿದುಕೊಂಡು ಬಂದಳು. ಕೈ ಹಿಡಿದುಕೊಂಡವನು ತಲೆಗೆ ಮಫ್ಲರ್ ಕಟ್ಟಿಕೊಂಡು ಸ್ವಚ್ಛವಾಗಿ ಅವಳ ಜೊತೆ ತೆರಳುತ್ತಿದ್ದ. ಅವಳು ನಿಂಗರಾಜುವನ್ನೇ ನೋಡುತ್ತಾ ಸ್ಟೇಷನ್ ಕಡೆ ಮುಖ ಮಾಡಿ ಆ ತಳ್ಳುಗಾಡಿಯ ಹಿಂದಾಗಿಸಿ ಸ್ಟೇಷನ್ ಹೊಕ್ಕು ಹಂಪಿ ಎಕ್ಸ್‌ಪ್ರೆಸ್ ಗಾಡಿಯಲ್ಲಿ ಸದ್ದಿಲ್ಲದೆ ಮಾಯವಾದದ್ದನ್ನು ಅವನು ಮೂಕನಾಗಿ ನೋಡಿದ. ಅವಳನ್ನು ತಡೆಯಲಿಲ್ಲ. ಕೂಗಲಿಲ್ಲ. 'ಟೀ ಕೊಡು' ಎಂದು ಹೇಳಿ ತನ್ನ ಪಕ್ಕ ಸಿಗರೇಟಿನ ಹೊಗೆಯನ್ನು ಸುರಳಿಯಾಕಾರವಾಗಿ ಬಿಡುತ್ತಿದ್ದವನಿಗೆ ಟೀ ಮಾಡುವುದೇ ಆ ಕ್ಷಣಕ್ಕೆ ಮುಖ್ಯ ಎನಿಸಿಬಿಟ್ಟಿತ್ತು.

* * *

ಆ ಕ್ಷಣದ ನಂತರ ಅವನಿಗೆ ಹಗಲಿನಲ್ಲಿಯೂ ನಿದ್ದೆ ಮಾಯವಾಯಿತು. ಹೊಸಪೇಟೆಯನ್ನು ರಾತ್ರಿ ಬಿಡುತ್ತಿದ್ದ, ಬೆಳಗ್ಗೆ ತಲುಪುತ್ತಿದ್ದ ಹಂಪಿ ಎಕ್ಸ್‌ಪ್ರೆಸ್ ರೈಲಿನ ಶಬ್ದ ಮಾತ್ರ ನಿಧಾನವಾಗಿ ನಿಧಾನವಾಗಿ ಕಿರಿಕಿರಿ ಎನಿಸಿತ್ತು. ಮೂರು ದಿನ ರಜೆ ಹಾಕಿ ರಾತ್ರಿ ಮಲಗಿದ. ನಿದ್ದೆ ಬರಲಿಲ್ಲ. ಬಿಟ್ಟ ಕಣ್ಣುಗಳಲ್ಲಿ ರಾತ್ರಿಯಿಡೀ ಒದ್ದಾಡಿದ. ಬೆಳಗಿನ ಜಾವದ ಹೊತ್ತಿಗೆ